# ಶಾಲೆಯಲ್ಲಿ ಹೆಚ್ಚು ಕಾಲವಿದ್ದರೆ ಐಕ್ಯೂ ವೃದ್ಧಿ

ಹೆಚ್ಚು ವರ್ಷಗಳ ಕಾಲ ಶಾಲೆಯಲ್ಲಿ ಕಲಿತರೆ ಬುದ್ಧಿಶಕ್ತಿಯ ಪ್ರಮಾಣ ಹೆಚ್ಚಾಗಲಿದೆ ಎಂದು ಹೊಸ ಅಧ್ಯಯನವೊಂದು ತಿಳಿಸಿದೆ. ನಾರ್ವೆ ಸಂಶೋಧಕರು ಒಂದು ಲಕ್ಷಕ್ಕೂ ಅಧಿಕ ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಿ ಸಿದ್ಧಪಡಿಸಲಾದ ವರದಿಯಲ್ಲಿ ಇಂಥದ್ದೊಂದು ಫಲಿತಾಂಶ ಹೊರಹೊಮ್ಮಿದೆ.

ಮಕ್ಕಳು ಶಾಲೆಯಲ್ಲಿ ಹೆಚ್ಚು ಕಾಲ ಕಳೆಯುವುದು, ಶಾಲೆಯಲ್ಲಿ ಸಹಪಾಠಿಗಳ ಜತೆ ಬೆರೆಯುವುದು, ಅವರೊಂದಿಗೆ ಸ್ಪರ್ಧಿಸುವುದು, ಚರ್ಚಿಸುವುದು, ಆಟೋಟಗಳಿಂದ ಅವರ ಬುದ್ಧಿಶಕ್ತಿಯ ಪ್ರಮಾಣ ಹೆಚ್ಚಾಗಲಿದೆ ಎನ್ನುವುದು ಅವರ ವಾದ.

ನಾರ್ವೆಯಲ್ಲಿ ಮಕ್ಕಳು ಶಾಲೆಗೆ ಹೋಗುವುದನ್ನು ಕಡ್ಡಾಯ ಮಾಡಿದ ಬಳಿಕ ಅಲ್ಲಿನ ಮಕ್ಕಳ ಬುದ್ಧಿ ಪ್ರಮಾಣ ಹೆಚ್ಚಾಗಿರುವುದು ಈ ವಾದಕ್ಕೆ ಕಾರಣ. ಒಂದು ಶಾಲೆ ಎಂದರೆ ಅಲ್ಲಿ ವಿವಿಧ ಪ್ರಮಾಣದ ಬುದ್ಧಿ ಇರುವ ಮಕ್ಕಳು ಒಂದೇ ಸೂರಿನಡಿ ಸೇರುತ್ತಾರೆ. ಇದರಿಂದ ಪ್ರತಿಯೊಬ್ಬ ಮಕ್ಕಳು ತಮ್ಮ ಪ್ರತಿಭೆಗಳನ್ನು ಇತರರೊಂದಿಗೆ ಹಂಚಿಕೊಂಡಾಗ ಕಡಿಮೆ ಬುದ್ಧಿ ಪ್ರಮಾಣ ಇರುವ ಮಗುವಿನಲ್ಲೂ ಸಾಕಷ್ಟು ಬದಲಾವಣೆಗಳು ಕಂಡುಬಂದಿವೆ ಎಂದು ವರದಿ ಹೇಳುತ್ತದೆ.

# ಹಿಮ ಕರಗುವ ಸಮಯ...

ಇತ್ತೀಚಿನ ದಶಕದಲ್ಲಿ ನೇಪಾಳದ ಭಾಗದಲ್ಲಿರುವ ಹಿಮಾಲಯ ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿ ಕರಗುತ್ತಿದೆ. ಇದರಿಂದ ಜಾಗತಿಕ ತಾಪಮಾನದಲ್ಲಿ ಭಾರಿ ಬದಲಾವಣೆ ಆಗಬಹುದು ಎಂದು ಅಂದಾಜು ಮಾಡಲಾಗಿದೆ. ನೇಪಾಳದ ಭಾಗದಲ್ಲಿರುವ ನೀರ್ಗಲ್ಲುಗಳು ತೆಳುವಾಗಿವೆ ಹಾಗೂ ಮತ್ತಷ್ಟು ಸಂಕುಚಿತವಾಗಿವೆ. ಇದರಿಂದ ಹಿಮ ಕರಗಿದ ನೀರಿನ ಪ್ರಮಾಣದಲ್ಲಿ ಸಾಕಷ್ಟು ಏರಿಕೆಯಾಗಿದೆ.

ಹೀಗೆ ಕರಗಿದ ನೀರ್ಗಲ್ಲುಗಳು ಕೆಲವೆಡೆ ಕೊಳಗಳಾಗಿ ನಿಂತಿವೆ. ಕೆಲವೆಡೆ ತೊರೆಗಳಾಗಿ ಹರಿದು ಹೋಗುತ್ತಿವೆ. ಹಿಮಾಲಯ ಪರ್ವತ ಶ್ರೇಣಿಯ ಸುಮಾರು 25 ಕಿ.ಮೀ.ನಷ್ಟು ಕರಗಿ ಸರೋವರದ ಪ್ರಮಾಣ ಹೆಚ್ಚಾಗಿದೆ. ಕೇವಲ ಒಂದು ವಾರದಲ್ಲಿ ಇಲ್ಲಿನ ಸರೋವರದಲ್ಲಿ ಅರ್ಧ ಪ್ರಮಾಣದಷ್ಟು ನೀರು ಹೆಚ್ಚಾಗಿದೆ.

ಇದೇ ಪ್ರಮಾಣದಲ್ಲಿ ನೀರ್ಗಲ್ಲುಗಳು ಕರಗುತ್ತಾ ಹೊದಲ್ಲಿ ಭೂಮಿಯ ಮೇಲೆ ನೀರಿನ ಪ್ರಮಾಣ ಹೆಚ್ಚಾಗಿ ಅದರಿಂದ ಜಾಗತಿಕ ತಾಪಮಾನದ ಮೇಲೆ ಭಾರೀ ಪರಿಣಾಮ ಬೀರಲಿದೆ ಎಂದು ಅಂದಾಜು ಮಾಡಲಾಗಿದೆ.

# ಮಕ್ಕಳ ತೊದಲು ಮಾತನ್ನು ತಿದ್ದಿ

ನಿಮ್ಮ ಮಗು ಈಗ ನಡೆಯಲು ಆರಂಭಿಸಿದ್ದರೆ, ಅದಕ್ಕೆ ನಿಮ್ಮ ಮಾತೂ ಅರ್ಥವಾಗುತ್ತಿರುತ್ತದೆ. ಅದರ ಜೊತೆ ನಿಮ್ಮ ಮಾತು ಸ್ಪಷ್ಟವಾಗಿರಲಿ. ತೊದಲು ಮಾತನಾಡುವ ಮಕ್ಕಳು ಭಾಷೆಯಲ್ಲಿನ ತಪ್ಪು ಉಚ್ಚಾರ ಅರಿಯರು. ಅವರಿಗೆ 4 ವರ್ಷ ಆಗುವವರೆಗೂ ಮಕ್ಕಳ ಭಾಷೆ ಹಾಗೂ ಉಚ್ಚಾರವನ್ನು ತಿದ್ದುವ ಕೆಲಸ ಮಾಡುತ್ತಲೇ ಇರಬೇಕು ಎಂದು ಹೊಸ ಅಧ್ಯಯನ ಹೇಳುತ್ತಿದೆ.

ಡೆನ್ಮಾರ್ಕ್ ವಿಶ್ವವಿದ್ಯಾಲಯದ ಸಂಶೋಧಕರ ಪ್ರಕಾರ, ಮಕ್ಕಳು ಸದಾ ತಮ್ಮೊಂದಿಗೆ ಮಾತನಾಡುವ ಹಿರಿಯರ ಮಾತುಗಳನ್ನೇ ಅನುಕರಿಸುತ್ತಿರುತ್ತಾರೆ. ಜತೆಗೆ ತಮ್ಮ ಭಾಷೆಯನ್ನು ಸ್ಥಳೀಯ ಶೈಲಿಯಲ್ಲಿ ಮೊದಲು ಕಲಿಯುತ್ತಾರೆ. ಹೀಗಾಗಿ ಅವರೊಂದಿಗೆ ಮಾತುನಾಡುವಾಗ ಭಾಷೆ ಸ್ಪಷ್ಟವಾಗಿರಬೇಕು ಹಾಗೂ ಮಕ್ಕಳ ತಪ್ಪು ಉಚ್ಚಾರವನ್ನೂ ತಿದ್ದಬೇಕು. ಹೀಗಾದಲ್ಲಿ ಮಗುವಿನ ಭಾಷೆ ಉತ್ತಮವಾಗಲಿದೆ ಎಂದು ಅವರು ಹೇಳುತ್ತಾರೆ.

ಅಧ್ಯಯನದ ಸಲುವಾಗಿ ಎರಡು ಹಾಗೂ ನಾಲ್ಕು ವರ್ಷದ ಮಕ್ಕಳ ಭಾಷೆಯನ್ನು ಅತಿ ಸೂಕ್ಷ್ಮವಾಗಿ ಗಮನಿಸಲಾಯಿತು. 'ಬೆಡ್' ಎಂಬ ಪದವನ್ನು 'ಬ್ಯಾಡ್' ಎಂದು ತಪ್ಪಾಗಿ ಅರ್ಥೈಸಿಕೊಂಡ ಎರಡನೇ ವರ್ಷದ ಮಗು ಅದೇ ಉಚ್ಚಾರ ಆ ಮಗುವಿನ ಮನಸ್ಸಿನಲ್ಲಿ ಅಚ್ಚಾಗಿತ್ತು. ಆಗ ಅವರ ಪೋಷಕರು ಅದರ ಸರಿಯಾದ ಉಚ್ಚಾರವನ್ನು ಹೇಳಿಕೊಟ್ಟರು. ನಾಲ್ಕನೇ ವಯಸ್ಸಿನ ಮಗು ಅದನ್ನು ತನ್ನ ಆಲೋಚನೆಗೆ ತಕ್ಕಂತೆ 'ಬಿಡ್' ಎಂದು ಕರೆಯಿತು. ಆದರೆ ಎರಡು ವರ್ಷದ ಮಗು 'ಬೆಡ್' ಎಂದು ತಿದ್ದಿಕೊಂಡಿತು.

ನಾಲ್ಕನೇ ವಯಸ್ಸಿನ ಮಗು ತನ್ನ ಉಚ್ಚಾರವನ್ನು ತನ್ನ ಆಲೋಚನೆಗೆ ತಕ್ಕಂತೆ ಬದಲಾಯಿಸಿತು. ಆದರೆ ಎರಡನೇ ವರ್ಷದ ಮಗು ತನಗೆ ಹೇಳಿಕೊಟ್ಟ ಉಚ್ಚಾರವನ್ನು ಪ್ರಯತ್ನಿಸಿತು. ಹೀಗಾಗಿ ಮಕ್ಕಳಿಗೆ ಸರಿಯಾದ ಉಚ್ಚಾರ ಹಾಗೂ ಭಾಷೆ ಹೇಳಿಕೊಡುವುದು ಅತ್ಯಗತ್ಯ ಎಂದು ಸಂಶೋಧಕರು ಹೇಳಿದ್ದಾರೆ.

■ ಇಎಸ್ಎಸ್

ತಡೆಯಿರಿ ತಡೆಯಿರಿ
ನಕಲಿನ ಬಗ್ಗೆ ಎಚ್ಚರಿಕೆ
ಚಂದನ, ಗಿಡ-ಮೂಲಿಕೆ, ಬೇರು, ಹೂಗಳು ಮತ್ತು ತೈಲಗಳ ನೈಸರ್ಗಿಕ ಉತ್ತಮಿಕೆಯೊಂದಿಗೆ ಅನನ್ಯ ಫಾರ್ಮ್ಯುಲೇಶನ್
ಏಕಮಾತ್ರ ಒರಿಜಿನಲ್ ನೋವಾ ಕ್ರೀಮ್ ...
ಸ್ವಲ್ಪವೇ ಹಚ್ಚಿ ಮತ್ತು ಸಾಫ್ಟ್, ಹೆಲ್ದೀ ಹಾಗೂ ಫ್ರೆಶ್ ಲುಕ್ಕಿಂಗ್ ಸ್ಕಿನ್ ಪಡೆಯಿರಿ
ತ್ವಚೆಗಾಗಿ ಆದರ್ಶ ಮಾಯ್‌ಶ್ಚರೈಜರ್ !




ಬಿರಿದ ಪಾದಗಳಿಗೆ ಅತ್ಯಂತ ಪರಿಣಾಮಕಾರಿ


ಒರಿಜಿನಲ್ ನೋವಾ ಕ್ರೀಮ್ ಸೀಲ್ ಮೇಲೆ ಹೊಂಬಣ್ಣದ ಹೊಲೊಗ್ರಾಮ್ ಸಹಿತ
ಒರಿಜಿನಲ್ ಬಾಟ್ಲಿ ಎಂಬೋಸ್ ಮಾಡಿದ ನೋವಾ ಲೋಗೋ ಸಹಿತ
NOVA
1935 ರಿಂದ
ನೋವಾ ಆ್ಯಂಡ್ ಕಂಪೆನಿ, 104, ರಿಜ್ವಿ ಚೇಂಬರ್ಸ್, ಹಿಲ್ ರೋಡ್, ಬಾಂದ್ರಾ (ಪ), ಮುಂಬಯಿ - 400050. ಫೋನ್ : 09323983486, 09901114251